0603/1003

**VI Semester 3 Years LL.B./X Semester B.A. LL.B. (5 Years)/B.B.A. LL.B. (5 Years) Examination, June/July 2014**

**INTELLECTUAL PROPERTY RIGHTS – II**

**(Opt. – V)**

Duration : 3 Hours | Max. Marks : 100

**Instructions** : 1. Answer **one** essay and **one** short note question or problem from **each** Unit.

2. Answer should be written either in **English** or **Kannada** completely.

**UNIT – I**

Q. No. 1. (a) "Copyright exists in expression of idea and not in idea" – Explain this statement in the light of various subject matters of copyright. Marks : 15

''ಕೃತಿಸ್ವಾಮ್ಯವು ವಿಚಾರಗಳ ಅಭಿವ್ಯಕ್ತತೆಗೆ ದೊರಕುವುದೇ ಹೊರತು ಕೇವಲ ವಿಚಾರಕ್ಕಲ್ಲ''– ಈ ಹೇಳಿಕೆಯನ್ನು ಕೃತಿಸ್ವಾಮ್ಯ ಹೊಂದುವ ಹಲವು ವಿಷಯ ವಸ್ತುಗಳೊಂದಿಗೆ ವಿವರಿಸಿರಿ.

OR/**ಅಥವಾ**

Enumerate the cases in which compulsory license in copyright may be granted. Who will grant the compulsory license and when it can be revoked ?

ಕೃತಿಸ್ವಾಮ್ಯವನ್ನು ಖಡ್ಡಾಯ ಪರವಾನಿಗೆಗೆ ಒಳಪಡಿಸಬಹುದಾದ ಸಂದರ್ಭಗಳನ್ನು ತಿಳಿಸಿರಿ. ಖಡ್ಡಾಯ ಪರವಾನಿಗೆ ಆದೇಶವನ್ನು ಯಾರು ಕೊಡಬಹುದು ? ಯಾವಾಗ ಇದನ್ನು ರದ್ದುಗೊಳಿಸಬಹುದು ?

(b) A biology teacher in a college collects the articles written by researchers on cloning and circulates the same amongst his students. Is he guilty of infringement ? Marks : 5

ಜೀವಶಾಸ್ತ್ರ ಶಿಕ್ಷಕರೊಬ್ಬರು ಅನೇಕ ಸಂಶೋಧಕರು ಕ್ಲೋನಿಂಗ್ ಬಗ್ಗೆ ಬರೆದಿರುವ ಲೇಖನಗಳನ್ನು ಸಂಗ್ರಹಿಸಿ ಅವುಗಳನ್ನು ತಮ್ಮ ವಿದ್ಯಾರ್ಥಿಗಳಿಗೆ ಹಂಚುವರು. ಇದು ಕೃತಿಸ್ವಾಮ್ಯ ಹಕ್ಕಿನ ಉಲ್ಲಂಘನೆ ಆಗುತ್ತದೆಯೇ ?

OR/**ಅಥವಾ**

A public library gets a copy of a book authored by a foreign author published abroad. Due to high price of the book, the library gets 6 copies of the books made. Is the library guilty of infringement ?

ಸಾರ್ವಜನಿಕ ಗ್ರಂಥಾಲಯವೊಂದು ವಿದೇಶದಲ್ಲಿ ಪ್ರಕಟವಾಗಿರುವ ವಿದೇಶಿ ಗ್ರಂಥ ಕರ್ತನೊಬ್ಬನು ರಚಿಸಿರುವ ಗ್ರಂಥದ ಪ್ರತಿಯೊಂದನ್ನು ತರಿಸಿಕೊಳ್ಳುತ್ತದೆ. ಈ ಪುಸ್ತಕದ ಬೆಲೆಯು ತುಂಬಾ ದುಬಾರಿಯಾಗಿರುವ ಹಿನ್ನೆಲೆಯಲ್ಲಿ ಗ್ರಂಥಾಲಯವು ಆ ಪುಸ್ತಕದ 6 ಪ್ರತಿಗಳನ್ನು ತಾನೇ ಮಾಡಿಸಿ ತನ್ನ ಗ್ರಂಥಾಲಯದಲ್ಲಿ ಇರಿಸುತ್ತದೆ. ಗ್ರಂಥಾಲಯ ಕೃತಿಸ್ವಾಮ್ಯದ ಉಲ್ಲಂಘನೆ ಮಾಡಿರುತ್ತದೆಯೇ ?

## UNIT – II

Q. No. 2. (a) Discuss the establishment of National Biodiversity Authority and its functions and powers. Marks : 15

ರಾಷ್ಟ್ರೀಯ ಜೀವ ವೈವಿಧ್ಯತೆ ಪ್ರಾಧಿಕಾರದ ರಚನೆ, ಇದರ ಕಾರ್ಯಗಳು ಮತ್ತು ಅಧಿಕಾರವನ್ನು ಚರ್ಚಿಸಿರಿ.

OR/**ಅಥವಾ**

Discuss the salient features of the Biological Diversity Act 2002.

ಜೈವಿಕ ವೈವಿಧ್ಯತೆ ಅಧಿನಿಯಮ 2002ರ ಪ್ರಮುಖ ಅಂಶಗಳನ್ನು ಚರ್ಚಿಸಿರಿ.

(b) Write a note on "Equitable benefit sharing". Marks : 5

''ನ್ಯಾಯಯುತ ಲಾಭದ ಪಾಲುಮಾಡುವಿಕೆ'' ಬಗ್ಗೆ ಟಿಪ್ಪಣಿ ಬರೆಯಿರಿ.

OR/**ಅಥವಾ**

Write an explanatory note on "Benefit claimers".

''ಲಾಭದ ವಾರಸುದಾರರು'' ಬಗ್ಗೆ ವಿವರಣಾತ್ಮಕ ಟಿಪ್ಪಣಿ ಬರೆಯಿರಿ.

## UNIT – III

Q. No. 3. (a) With the reference to relevant provisions of the Act, discuss the limitations of the Farmers' rights and Breeders' rights. Marks : 15

ಕಾಯ್ದೆಯ ಪ್ರಮುಖ ವಿಧಿಗಳ ಉಲ್ಲೇಖದೊಂದಿಗೆ ರೈತರ ಹಕ್ಕುಗಳು ಮತ್ತು ಉತ್ಪಾದಕರ ಹಕ್ಕುಗಳ ಮೇಲಿನ ಮಿತಿಗಳನ್ನು ಚರ್ಚಿಸಿರಿ.

OR/**ಅಥವಾ**

Explain the aims and objectives of the protection of plant varieties and Farmers' Rights Act, 2001. What are its salient features ?

ಸಸ್ಯ ವೈವಿಧ್ಯಗಳ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯ್ದೆ, 2001ರ ಗುರಿ ಮತ್ತು ಉದ್ದೇಶಗಳನ್ನು ವಿವರಿಸಿರಿ. ಈ ಕಾಯ್ದೆಯ ಪ್ರಮುಖ ಅಂಶಗಳು ಯಾವುವು ?

(b) Write a note on 'The Protection of Plant Varieties and Farmers' Rights Authority'. Marks : 5

'ಸಸ್ಯ ವೈವಿಧ್ಯಗಳ ರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರ'ದ ಬಗ್ಗೆ ಟಿಪ್ಪಣಿ ಬರೆಯಿರಿ.

OR/**ಅಥವಾ**

What are 'Registrable varieties' under the Protection of Plant Varieties and Farmers' Rights Act ?

ಸಸ್ಯ ವೈವಿಧ್ಯಗಳ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯ್ದೆಯಡಿ 'ನೋಂದಣಿ ಅರ್ಹವಾಗುವ ತಳಿಗಳು' ಯಾವುವು ?

## UNIT – IV

Q. No. 4. (a) What is the significance of a design ? Discuss the salient features of Designs Act, 2000. Marks : 15

ವಿನ್ಯಾಸದ ಪ್ರಾಮುಖ್ಯತೆಯೇನು ? ವಿನ್ಯಾಸಗಳ ಅಧಿನಿಯಮ, 2000ರ ಪ್ರಮುಖ ಅಂಶಗಳನ್ನು ವಿವರಿಸಿರಿ.

OR/**ಅಥವಾ**

What rights are available to the proprietor of design ? How can he protect his rights ?

ವಿನ್ಯಾಸದ ಮಾಲೀಕನಿಗೆ ದೊರಕುವ ಹಕ್ಕುಗಳು ಯಾವುವು ? ಆತನು ತನ್ನ ಹಕ್ಕುಗಳನ್ನು ಹೇಗೆ ರಕ್ಷಿಸಿಕೊಳ್ಳಬಹುದು ?

(b) An architect creates a certian design for multi-storeyed building. Can the contractor who constructs the building claim copyright in designs ? Marks : 5

ವಾಸ್ತುಶಿಲ್ಪಿಯೊಬ್ಬನು ಒಂದು ಬಹುಮಹಡಿ ಕಟ್ಟಡದ ವಿನ್ಯಾಸವನ್ನು ತಯಾರಿಸುವನು. ಇದೀಗ ಈ ವಿನ್ಯಾಸದ ಕಟ್ಟಡವನ್ನು ನಿರ್ಮಿಸಿದ ಗುತ್ತಿಗೆದಾರನು ವಿನ್ಯಾಸದ ಮೇಲಿನ ಕೃತಿಸ್ವಾಮ್ಯ ಹಕ್ಕನ್ನು ಪಡೆಯಲು ಅರ್ಹನೇ ?

OR/**ಅಥವಾ**

A multi-national company designs a shoe in some country in Europe. But the shoe with the similar design is already sold in India. Does the manufacturer have to apply for registration in India too. Will he get it ?

ಯುರೋಪಿನ ಒಂದು ರಾಷ್ಟ್ರದಲ್ಲಿ ಬಹುರಾಷ್ಟ್ರೀಯ ಕಂಪನಿಯೊಂದು ಪಾದರಕ್ಷೆಯ ಹೊಸ ವಿನ್ಯಾಸವನ್ನು ತಯಾರಿಸಿತು. ಆದರೆ ಅದೇ ವಿನ್ಯಾಸವನ್ನು ಹೋಲುವ ಪಾದರಕ್ಷೆಯನ್ನು ಭಾರತದಲ್ಲಿ ಈಗಾಗಲೇ ಮಾರಾಟವಾಗಿರುತ್ತದೆ. ಈಗ ಬಹುರಾಷ್ಟ್ರೀಯ ಕಂಪನಿಯು ನೋಂದಣಿ ಸಲುವಾಗಿ ಭಾರತದಲ್ಲಿ ಅರ್ಜಿ ಸಲ್ಲಿಸಬೇಕೆ ? ಮತ್ತು ಹಕ್ಕನ್ನು ಪಡೆಯಬಹುದೇ ?

## UNIT – V

Q. No. 5. (a) Highlight the importance of biodiversity and narrate the important features of Convention of Biological Diversity (CBD) 1993. Marks : 15

ಜೈವಿಕ ವೈವಿಧ್ಯತೆಯ ಪ್ರಾಮುಖ್ಯತೆಯನ್ನು ಉಲ್ಲೇಖಿಸಿರಿ. ಹಾಗೆಯೇ ಜೈವಿಕ ವೈವಿಧ್ಯತೆ ಒಪ್ಪಂದ (CBD) 1993 ರ ಪ್ರಮುಖ ಅಂಶಗಳನ್ನು ತಿಳಿಸಿರಿ.

OR/**ಅಥವಾ**

Elucidate how the Paris and Berne Conventions have contributed for the international protection of IPRs.

ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಬೌದ್ಧಿಕ ಸ್ವತ್ತುಗಳ ರಕ್ಷಣೆಗೆ ಪ್ಯಾರೀಸ್ ಮತ್ತು ಬರ್ನ್ ಒಪ್ಪಂದಗಳ ಕೊಡುಗೆಯನ್ನು ವಿಶದೀಕರಿಸಿರಿ.

(b) Write a note on 'TRIPs Agreement'. Marks : 5

'ಟ್ರಿಪ್ಸ್ ಒಪ್ಪಂದ'ದ ಬಗ್ಗೆ ಟಿಪ್ಪಣಿ ಬರೆಯಿರಿ.

OR/**ಅಥವಾ**

Write a note on 'International Treaty on Plant Genetic Resources 2001'.

ಸಸ್ಯ ವಂಶಾಣು ಸಂಪನ್ಮೂಲಗಳ ಅಂತರ್‌ರಾಷ್ಟ್ರೀಯ ಒಪ್ಪಂದ 2001'ರ ಬಗ್ಗೆ ಟಿಪ್ಪಣಿ ಬರೆಯಿರಿ.